# 'ಬಿಸಿಯೂಟ' ವಿಷವಾಗದಿರಲಿ

**ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಹೆಚ್ಚಿಸುವಲ್ಲಿ 'ಬಿಸಿಯೂಟ' ಅತ್ಯಂತ ಯಶಸ್ವಿ ಕಾರ್ಯಕ್ರಮ ಎಂಬುದರಲ್ಲಿ ಎರಡು ಮಾತಿಲ್ಲ. ಆರ್ಥಿಕವಾಗಿ ದುರ್ಬಲರಾದ ಕುಟುಂಬಗಳ ಮಕ್ಕಳಿಗೆ ಈ ಯೋಜನೆ ನಿಜಕ್ಕೂ ಒಂದು ವರದಾನ.**

ಬಿಹಾರದ ಸರನ್ ಜಿಲ್ಲೆಯ ಸರ್ಕಾರಿ ಶಾಲೆಯಲ್ಲಿ ಮಧ್ಯಾಹ್ನದ ಬಿಸಿಯೂಟ ಉಂಡ 22ಕ್ಕೂ ಹೆಚ್ಚು ಮಕ್ಕಳು ಜೀವ ಕಳೆದುಕೊಂಡ ಘಟನೆ ನಾಗರಿಕ ಸಮಾಜವನ್ನು ತಲ್ಲಣಗೊಳಿಸುವಂತಹದ್ದು. ಹೊಟ್ಟೆಯ ಹಸಿವು ತಣಿಸಿ ಚೈತನ್ಯ ನೀಡಬೇಕಿದ್ದ ಊಟದ ತಟ್ಟೆ ವಿಷದ ತಟ್ಟೆಯಾಗಿ ಸಾವು ತಂದದ್ದು ವಿಪರ್ಯಾಸ.

ಆಹಾರಪದಾರ್ಥ ಸಂಗ್ರಹಕ್ಕೆ ಸೂಕ್ತ ವ್ಯವಸ್ಥೆ ಇಲ್ಲದೆ ಅದು ಕೆಟ್ಟುಹೋಗಿದ್ದು ಈ ದುರಂತಕ್ಕೆ ಕಾರಣ ಎಂಬುದು ಒಂದು ವರದಿ. ಆಹಾರ ಪದಾರ್ಥಗಳಿಗೆ  ಬೇಕೆಂದೇ ವಿಷ ಹಾಕಲಾಗಿತ್ತು ಎಂಬುದು ಇನ್ನೊಂದು ವರದಿ. ಈ ಕಾರಣಗಳು ಏನೇ ಇರಲಿ, ಅತ್ಯಂತ ಸದುದ್ದೇಶದ ಕಾರ್ಯಕ್ರಮದ ಅನುಷ್ಠಾನದಲ್ಲಿರುವ ದೋಷಗಳನ್ನು ಈ ಪ್ರಕರಣ ಎತ್ತಿ ಹಿಡಿಯುತ್ತದೆ.

ಈ ಹಿಂದೆಯೂ ಬಿಸಿಯೂಟ ಉಂಡ ಮಕ್ಕಳು ಅಸ್ವಸ್ಥರಾದಂತಹ ಪ್ರಕರಣಗಳು ರಾಷ್ಟ್ರದಲ್ಲಿ ಆಗಿಂದಾಗ್ಗೆ ವರದಿಯಾಗಿವೆ. ಆದರೆ ಈ ಮಟ್ಟದ ದುರಂತ ಸಂಭವಿಸಿದ್ದು ಇದೇ ಮೊದಲು. ಈ ಪ್ರಕರಣ ಸೃಷ್ಟಿಸಿರುವ ಆಘಾತದ ಪ್ರಮಾಣವೂ ಅಗಾಧವಾದದ್ದು.

ರಾಷ್ಟ್ರದ ಸುಮಾರು 11 ಕೋಟಿ ಶಾಲಾ ಮಕ್ಕಳ ಹಸಿವು ನೀಗಿಸುವಂತಹ ಬಿಸಿಯೂಟದ ಕಾರ್ಯಕ್ರಮ ವಿಶ್ವದಲ್ಲೇ ಬೃಹತ್ತಾದದ್ದು. ಇಂತಹ ಬೃಹತ್ ಕಾರ್ಯಕ್ರಮದ ಅನುಷ್ಠಾನ ಹಂತದಲ್ಲಿನ ಅವ್ಯವಸ್ಥೆಗಳ ಬಗ್ಗೆ ಆಗಿಂದಾಗ್ಗೆ ವರದಿಗಳಾಗಿವೆ. ಆಹಾರ ಪದಾರ್ಥಗಳ ಆಯ್ಕೆ, ಗುಣಮಟ್ಟ , ಸ್ವಚ್ಛತೆ, ಸಿಬ್ಬಂದಿ ಕೊರತೆ – ಹೀಗೆ ನಾನಾ ಸಮಸ್ಯೆಗಳ ಸುತ್ತ ವರದಿ, ವಿಶ್ಲೇಷಣೆಗಳೂ ಪ್ರಕಟವಾಗಿವೆ. ಹೀಗಿದ್ದೂ  ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಹೆಚ್ಚಿಸುವಲ್ಲಿ 'ಬಿಸಿಯೂಟ' ಅತ್ಯಂತ ಯಶಸ್ವಿ ಕಾರ್ಯಕ್ರಮ ಎಂಬುದರಲ್ಲಿ ಎರಡು ಮಾತಿಲ್ಲ. ಆರ್ಥಿಕವಾಗಿ ದುರ್ಬಲರಾದ ಕುಟುಂಬಗಳ ಮಕ್ಕಳಿಗೆ ಈ ಯೋಜನೆ ನಿಜಕ್ಕೂ ಒಂದು ವರದಾನ.

1800ರಷ್ಟು ಹಿಂದೆಯೇ ಜಪಾನಿನ ಖಾಸಗಿ ಶಾಲೆಗಳಲ್ಲಿ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಉಚಿತ ಊಟ ನೀಡುವ ಪರಿಕಲ್ಪನೆಯನ್ನು ಸಾಕಾರಗೊಳಿಸಲಾಗಿತ್ತು. ಭಾರತದಲ್ಲಿ ಈ ಯೋಜನೆ ಮೊದಲು ಆರಂಭವಾದದ್ದು ತಮಿಳುನಾಡಿನಲ್ಲಿ. 1956ರಲ್ಲೇ ಅಂದಿನ ಮುಖ್ಯಮಂತ್ರಿ ಕೆ. ಕಾಮರಾಜ್ ಅವಧಿಯಲ್ಲಿ ಆರಂಭವಾದ ಈ ಯೋಜನೆ ಶಾಲಾ ಮಕ್ಕಳ ಹಾಜರಾತಿ ಸುಧಾರಣೆಗೆ ನೆರವಾಗಿತ್ತು. ತಮಿಳುನಾಡಿನಲ್ಲಿ ಭಾಗಶಃ ಜಾರಿಯಾಗಿದ್ದ ಈ ಯೋಜನೆಯನ್ನು 1982ರಲ್ಲಿ  ರಾಜ್ಯದಾದ್ಯಂತ ಪೂರ್ಣ ಪ್ರಮಾಣದಲ್ಲಿ ವಿಸ್ತರಿಸಿ ಹೊಸ ರೂಪ ನೀಡಿದವರು ಅಂದಿನ ಆ ರಾಜ್ಯದ ಮುಖ್ಯಮಂತ್ರಿ ಎಂ.ಜಿ.ರಾಮಚಂದ್ರನ್. ಅಂದಿನಿಂದ ತಮಿಳುನಾಡಿನಲ್ಲಿ ಈ ಯೋಜನೆ ಅತ್ಯಂತ ಯಶಸ್ವಿಯಾಗಿ ಜಾರಿಗೊಂಡಿದೆ. ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಹೆಚ್ಚಿಸುವುದು ಹಾಗೂ ಮಧ್ಯದಲ್ಲೇ ಶಾಲೆ ಬಿಡುವ ಮಕ್ಕಳ ಪ್ರಮಾಣವನ್ನು ಕಡಿಮೆ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶ. ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟವನ್ನು ನೀಡಬೇಕೆಂದು ಎಲ್ಲಾ ರಾಜ್ಯ ಸರ್ಕಾರಗಳಿಗೆ ಸುಪ್ರೀಂಕೋರ್ಟ್ ಸಹ 2001ರಲ್ಲಿ ಕಡ್ಡಾಯ ಮಾಡಿತು. ಆರಂಭದಲ್ಲಿ ಈ ಯೋಜನೆ ಅಳವಡಿಸಿಕೊಳ್ಳಲು ಕೆಲವು ರಾಜ್ಯಗಳು ಪ್ರತಿರೋಧ ತೋರಿದರೂ  2005ರೊಳಗೆ ಈ ಯೋಜನೆ ಬಹುತೇಕ ಎಲ್ಲಾ ರಾಜ್ಯಗಳಲ್ಲಿ ಸಾರ್ವತ್ರಿಕವಾಗಿ ಜಾರಿಯಾಗಿದೆ.

ರಾಜ್ಯದಲ್ಲಿ ಸುಮಾರು 67 ಲಕ್ಷ ಶಾಲಾ ಮಕ್ಕಳು ಮಧ್ಯಾಹ್ನದ ಬಿಸಿಯೂಟದ  ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ. ಪ್ರತಿ ದಿನ ಒಂದು ಹೊತ್ತಾದರೂ ಮಕ್ಕಳಿಗೆ ಪೌಷ್ಟಿಕ ಆಹಾರ ಸಿಗುತ್ತದೆ ಎಂಬ ಅಂಶ ಮಕ್ಕಳನ್ನು ಶಾಲೆಗಳಿಗೆ ಕಳಿಸಲು ಅನೇಕ ತಂದೆತಾಯಿಗಳಿಗೆ ಪ್ರೇರಕವಾಗಿದೆ. ಇಂತಹದೊಂದು ಘನ ಉದ್ದೇಶದ ಯೋಜನೆಗೆ ಕಳಂಕ ಬಾರದಂತೆ ಸಮರ್ಪಕವಾಗಿ ಜಾರಿ ಮಾಡಬೇಕಿರುವುದು ಸರ್ಕಾರದ ಹೊಣೆ. ಬರೀ ಊಟದ ಅವಶ್ಯಕತೆಯನ್ನಷ್ಟೇ ಈ ಯೋಜನೆ ಪೂರೈಸುವುದಿಲ್ಲ. ಸಾಮೂಹಿಕ ಭೋಜನದ ಪರಿಕಲ್ಪನೆ, ಜಾತಿ ಭೇದಗಳ ಗಡಿಯನ್ನು ಹೋಗಲಾಡಿಸುವಂತಹದ್ದು. ಅನೇಕ ಮಹಿಳೆಯರಿಗೆ ಉದ್ಯೋಗಗಳನ್ನು ನೀಡುವಂತಹದ್ದು ಎಂಬುದನ್ನು ಗಮನಿಸಬೇಕು.

ಆಹಾರ ಪದಾರ್ಥಗಳ ಗುಣಮಟ್ಟ ಹಾಗೂ ಆಹಾರ ತಯಾರಿಕೆಯಲ್ಲಿ ಸ್ವಚ್ಛತೆ, ನೈರ್ಮಲ್ಯ ಕಾಪಾಡಿಕೊಳ್ಳುವುದು ಮೂಲಭೂತ ಅವಶ್ಯಕತೆ. ಈ ವಿಚಾರದಲ್ಲಿ ಯಾವುದೇ ರಾಜಿಯೂ ಇರಕೂಡದು. ಈ ಯೋಜನೆ ಹಳಿ ತಪ್ಪದಂತೆ ಮಕ್ಕಳ ಪೋಷಕರು ಹಾಗೂ ಸಮುದಾಯ ನಿರಂತರ ನಿಗಾ ವಹಿಸುವಂತಹ ಸಾಮಾಜಿಕ ಲೆಕ್ಕ ಪರಿಶೋಧನೆಯಲ್ಲಿ (ಸೋಷಿಯಲ್ ಆಡಿಟ್) ಸಕ್ರಿಯವಾಗಿ ತೊಡಗಿಕೊಳ್ಳಬೇಕು. ಯೋಜನೆ ಅನುಷ್ಠಾನದ ಎಲ್ಲಾ ಹಂತಗಳಲ್ಲಿ ನಿಗಾ ಇಟ್ಟು  'ಬಿಹಾರದ ದುಃಸ್ವಪ್ನ' ಮರುಕಳಿಸದಂತೆ ನೋಡಿಕೊಳ್ಳುವುದು ಇಂದಿನ ಅಗತ್ಯ.

**■ ಸಿ.ಜಿ.ಮಂಜುಳಾ**



ಈಶ್ವರ್